**ಅಸಲು ದಾವಾ ನಂಃ 115/2016**
**ಪಿ.ಡಬ್ಲ್ಯೂಃ -01**

**ದಿನಾಂಕಃ 17.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ.ಆರ್., 1 ನೇ ಪ್ರತಿವಾದಿ ಪರ ವಕೀಲರಿಂದ**

4. ದಾವಾ ಆಸ್ತಿಯ ಸರ್ವೆ ನಂ. 37/ಪಿ-3 ಅಂತ ಇದ್ದು, ಅದರ ಕ್ಷೇತ್ರವು 8 ಎಕರೆ 27 ಗುಂಟೆ ಇರುತ್ತದೆ. ದಾವಾ ಜಮೀನನ್ನು ನಾನು ನಿಖರವಾಗಿ ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಖರೀದಿಸಿರುತ್ತೇನೆ ಅಂತ ಹೇಳಲು ಬರುವುದಿಲ್ಲ ಆದರೆ ಅಂದಾಜು 15 ವರ್ಷಗಳಾಗಿರುತ್ತವೆ. ಸದರಿ ಆಸ್ತಿಯನ್ನು ನಾನು ವೃಷಭೇಂದ್ರಯ್ಯ ಮತ್ತು ಸಿದ್ದಮ್ಮ ಇವರಿಂದ ಖರೀದಿಸಿರುತ್ತೇನೆ. ಅದೇ ದಿನ ಅದೇ ಸರ್ವೆ ನಂಬರಿನಲ್ಲಿ 1 ನೇ ಪ್ರತಿವಾದಿಯು ಸಹ 4 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ.

5. ನನ್ನ ಕ್ರಯಪತ್ರವು ದಿಃ 13.01.2006 ರಂದು ಎಸ್.ಆರ್. ನಂ. 2168/2005-06 ರಂತೆ ನೊಂದಣಿಯಾಗಿರುತ್ತದೆ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿಯ ಕ್ರಯಪತ್ರವು 2169/2005-06 ರಂತೆ ದಿಃ13.01.2006 ರಂದು ನೊಂದಣಿಯಾಗಿರುತ್ತದೆ ಎಂದರೆ ಸರಿ.

6. ನಾನು ದಾವಾ ಜಮಿನನ್ನು ಖರೀದಿ ಮಾಡುವ ಪೂರ್ವದಲ್ಲಿ ಅಳತೆ ಮಾಡಿಸಿ ಖರೀದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಖರೀದಿಸಿದ ನಂತರ ಅಳತೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಜಮೀನು ಖರೀದಿಸಿದ ನಂತರ ಅಳತೆ ಮಾಡಿಸಲು ಅರ್ಜಿಯನ್ನು ಕೊಟ್ಟಿದ್ದ ಎಂದರೆ ಸಾಕ್ಷಿಯು ನಾವು ಸಹ ಕೊಟ್ಟಿದ್ದೆವು, ಆದರೆ 1 ನೇ ಪ್ರತಿವಾದಿಯು ಅಳತೆ ಮಾಡಿಸಲು ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಅಳತೆ ಮಾಡಲು ತಾಲ್ಲೂಕು ಸರ್ವೆಯರ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಅಳತೆ ಮಾಡುವ ಪೂರ್ವದಲ್ಲಿ ಸದರಿ ದಾವಾ ಜಮೀನಿನ ಅಕ್ಕಪಕ್ಕದ ಜಮೀನಿನವರಿಗೆ ಹಾಜರಿರುವಂತೆ ನೋಟೀಸುಗಳನ್ನು ನೀಡಿದ್ದರು ಎಂದರೆ ಸರಿ. ಅಳತೆಯನ್ನು ಮಾಡಿದಾಗ ನನ್ನ ಜಮೀನಿನಲ್ಲಿ ವ್ಯತ್ಯಾಸ ಇರುತ್ತದೆ ಅಂತ ತಿಳಿಸಿದ್ದರು ಎಂದರೆ ಸರಿಯಲ್ಲ.

7. ದಾವಾ ಜಮಿನಿನ ಉತ್ತರ ದಿಕ್ಕಿಗೆ ಃ ಬದುವು ಬರುತ್ತದೆ ಎಂದರೆ ಸರಿಯಲ್ಲ. ಬದುವಿನ ಪಕ್ಕದಲ್ಲಿ ಲೋಕೇಶ್ ರವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಉತ್ತರ ದಿಕ್ಕಿನಲ್ಲಿದ್ದ ಬದುವನ್ನು ನಾನು ತೆರವುಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ಬದುವನ್ನು ತೆರವುಗೊಳಿಸಿದ್ದರಿಂದ ಅಳತೆ ಮಾಡಿದರೆ ವ್ಯತ್ಯಾಸ ಬರುತ್ತದೆ ನೀವುಗಳೇ ಹಿರಿಯರ ಸಮಕ್ಷಮದಲ್ಲಿ ರಾಜೀ ಮಾಡಿಕೊಳ್ಳಿರಿ ಅಂತ ತಾಲ್ಲೂಕು ಸರ್ವೇಯರ್ ತಿಳುವಳಿಕೆ ಹೇಳಿರುತ್ತಾರೆ ಎಂದರೆ ಸರಿಯಲ್ಲ.

8. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ತಾಲ್ಲೂಕು ಸರ್ವೇಯರ್ ರವರು ದಿಃ26.08.2016 ರಂದು ನನ್ನ ಮತ್ತು 1 ನೇ ಪ್ರತಿವಾದಿಯ ಜಮೀನಿಗೆ ಸಂಬಂಧಿಸಿದಂತೆ ಹದ್ದುಬಸ್ತು ಮತ್ತು ಸ್ವಾಧೀನಕ್ಕೂ ವ್ಯತ್ಯಾಸ ಇದ್ದು ಈ ಹಿಂದೆ ಆಗಿರುವ ಪೋಡನ್ನು ರದ್ದುಪಡಿಸಿ ಹಕ್ಕು ಮತ್ತು ಸ್ವಾಧೀನಾನುಭವಕ್ಕೆ ತಾಳೆ ಇಟ್ಟು ಹೊಸದಾಗಿ ಪೋಡಿ ದುರಸ್ಥಿ ಮಾಡಿಕೊಳ್ಳುವಂತೆ ಹಿಂಬರಹವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಿಂಬರಹವನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಎರಡೂ ಜಮೀನುಗಳನ್ನು ಅಳತೆ ಮಾಡಿದರೆ ಇಬ್ಬರ ಜಮೀನು ಸರಿಯಾಗಿ ಸಿಗುತ್ತವೆ ಎಂದರೆ ಸಾಕ್ಷಿಯು ಮುಂದುವರೆದು ಅಳತೆ ಮಾಡಲು ಅವರು ಬಿಡುವುದಿಲ್ಲ ಎಂದು ನುಡಿಯುತ್ತಾರೆ.

9. ಜಮೀನನ್ನು ಸರಿಯಾಗಿ ಅಳತೆ ಮಾಡಿಸಿದರೆ ನನ್ನ ಜಮೀನು ನನಗೆ ಮತ್ತು 1 ನೇ ಪ್ರತಿವಾದಿಯ ಜಮೀನು ಆತನಿಗೆ ಸರಿಯಾಗಿ ಸಿಗುತ್ತವೆ ಎಂದರೆ ಸರಿ. ಆದ್ದರಿಂದ, ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿ ಹೊಸದಾಗಿ ಜಮಿನುಗಳನ್ನು ಅಳತೆ ಮಾಡಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ.

10. ಪ್ರತಿವಾದಿಯವರು ನನ್ನ ಸ್ವಾಧೀನಾನುಭವಕ್ಕೆ ಎಂದಿಗೂ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಪಟ್ಟಾಗ ಅವರು ನನಗೆ ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಊರಿನ ಹಿರಿಯರ ಮಾತನ್ನು ತಿರಸ್ಕರಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ 1 ನೇ ಪ್ರತಿವಾದಿಯ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.